ಇ) ಸದರಿ ನಾಲೆಯಲ್ಲಿ ಸಣ್ಣ ಪುಟ್ಟ ಕಾಮಗಾರಿಗಳ ಹೊರತಾಗಿ ನಾಲೆಯ ಮಣ್ಣಿನ ಅಗೆತವು ಪೂರ್ಣಗೊಂಡಿರುತ್ತದೆ. ಹಾಗೂ ನಾಲೆಗೆ ಲೈನಿಂಗ್ ಅಳವಡಿಸುವ ಕೆಲಸ ಬಾಕಿ ಇರುತ್ತದೆ.

**ಮಂಡ್ಯ ತಾಲ್ಲೂಕಿನ ಸ್ಯಾನಿಟೋರಿಯಂನಲ್ಲಿ ಔಷಧಿ ಕೊರತೆ.**

823 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ), ಶ್ರೀ ಎನ್. ತಮ್ಮಣ್ಣ (ಕೆರೆಗೋಡ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಂಡ್ಯ ತಾಲ್ಲೂಕಿನ ಮಹಾತ್ಮ ಗಾಂಧಿ ಸ್ಯಾನಿಟೋರಿಯಂನಲ್ಲಿ ಔಷಧಿಗಳ ಸರಬರಾಜು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ರೋಗಗಳಿಗೆ ಔಷಧಿ ಪೂರೈಸಲು ಸರ್ಕಾರವು ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಸರಬರಾಜು ನಿಂತಿರುವುದಿಲ್ಲ.

ಆ) ಮಹಾತ್ಮಾ ಗಾಂಧಿ ಟಿ.ಬಿ. ಆಸ್ಪತ್ರೆ ಬಿ.ಹೊಸೂರು ಕಾಲೋನಿ ಇಲ್ಲಿಗೆ 1992-93ನೇ ಸಾಲಿನಲ್ಲಿ (ಜಿಲ್ಲಾ ಪರಿಷತ್ತಿನ ಶೇ. 40 ರಷ್ಟು ಅನುದಾನ ಹೊರತು ಪಡಿಸಿ) ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು ಇಲ್ಲಿಂದ ಪೂರೈಸಾದ ಔಷಧಿಗಳ ವಿವರ ಕೆಳಕಂಡಂತೆ ಇದೆ.

| | |
|---|---|
| ನಿಗದಿಪಡಿಸಿದ ಹಣ | ರೂ. 2,94,000-00 |
| ಔಷಧಿಗಳ ಪೂರೈಕೆ | ರೂ. 2,74,272-77 |

ಕೆಲವು ಕ್ಷಯ ನಿರೋಧಕ ಔಷಧಿಗಳಿಗೆ, ದರಗುತ್ತಿಗೆ ನಿಗಧಿಯಾಗಿರುವುದಿಲ್ಲದೆ ಕಾರಣ ಅಂತಹ ಔಷಧಿಗಳನ್ನು ಸರಬರಾಜು ಮಾಡಿರುವುದಿಲ್ಲ. ದರ ಗುತ್ತಿಗೆಯು ನಿಗಧಿಯಾದ ಕೂಡಲೇ ರೂ. 19,027-23 ಮೌಲ್ಯದ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡಲಾಗುವುದು.

ಈ ಆಸ್ಪತ್ರೆಗೆ 60:40ರ ಪ್ರಮಾಣದಲ್ಲಿ ಸರ್ಕಾರಿ ಔಷದಿ ಮಳಿಗೆ, ಬೆಂಗಳೂರು ಮತ್ತು ಜಿಲ್ಲಾ ಪರಿಷತ್ ಮಂಡ್ಯ ಇವುಗಳು ಔಷಧಿಗಳನ್ನು ಸರಬರಾಜು ಮಾಡುತ್ತವೆ. ಶೇ.40 ರಷ್ಟು ಅನುದಾನದ ಹಣದಲ್ಲಿ ಆಸ್ಪತ್ರೆಯ ಅಧೀಕ್ಷಕರು ನೇರವಾಗಿ ಖರೀದಿಸುವರು.

**ವಿಶ್ವ ವಿದ್ಯಾಲಯದ ಮಟ್ಟದಲ್ಲಿ ಹೆಚ್ಚು ಅಂಕಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೇರ ನೇಮಕಾತಿ.**

831 - ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಹೆಚ್ಚಿಗೆ ಅಂಕ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 3 ಜನರಿಗೆ ನೇರವಾದ ಹುದ್ದೆಯನ್ನು ಕೊಡಬೇಕೆಂದು ಮಾಡಿದ ಕಾನೂನು ಜಾರಿಗೆ ಬಂದಿರುವುದು ನಿಜವೇ?*

*ಆ) ಬಂದಿದ್ದಲ್ಲಿ, 2 ನೇ ದರ್ಜೆಯ ಗೆಜೆಟೆಡ್ ಹುದ್ದೆಗಳನ್ನು ಎಷ್ಟು ಜನರಿಗೆ ನೀಡಲಾಗಿದೆ?*

*ಇ) ಈ ನಿಯಮವು ಜಾರಿಗೆ ಬರದಿರಲು ಕಾರಣವೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ವಿಶೇಷ ನೇಮಕಾತಿ ನಿಯಮಗಳು ಜಾರಿಯಲ್ಲಿವೆ.

ಆ) 27

ಇ) ಉದ್ಭವಿಸುವುದಿಲ್ಲ.

**ಹಂಗಾಮಿ ನೌಕರರನ್ನು ಖಾಯಂ ಗೊಳಿಸುವುದು**

830 - ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

*ಅ) ಶ್ರೇಷ್ಠ ನ್ಯಾಯಾಲಯದ ಆದೇಶದ ರೀತ್ಯ ಸುಮಾರು 68,000 ಹಂಗಾಮಿ ನೌಕರರನ್ನು ಖಾಯಂ ಮಾಡಿರುವುದರಿಂದ ಮೀಸಲಾತಿಯ ಕೊರತೆಯನ್ನು ಯಾವ ರೀತಿ ತುಂಬಲಾಗುವುದು?*

*ಆ) ಈ ಮೀಸಲಾತಿಯ ಕೊರತೆಯನ್ನು ತುಂಬಲು ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರವೇ ಸಂವಿಧಾನದ ಹಕ್ಕನ್ನು ಮೀರಿದಂತೆ ಆಗುವುದಿಲ್ಲವೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸಂಘವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ : 8307-11:83ರಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 23-2-90ರಂದು ತನ್ನ ಅಂತಿಮ ತೀರ್ಪಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಅಥವಾ ಅದಕ್ಕಿಂತ ಮೊದಲು ನೇಮಕಗೊಂಡ ಸಾಂದರ್ಭಿಕ: ದಿನಗೂಲಿ ನೌಕರರನ್ನು ದಿನಾಂಕ 31-12-97 ರೊಳಗಡೆ ಸರ್ಕಾರಿ ಸೇವೆಯಲ್ಲಿ ವಿಲೀನ ಗೊಳಿಸುವಂತೆ ನೀಡಿದ ಆದೇಶದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 2ಎಸ್‌ಎಲ್‌ಸಿ 90,ದಿನಾಂಕ 6-8-90ರ ಆದೇಶವನ್ನು ಹೊರಡಿಸಲಾಗಿದೆ. ಸರ್ವೋನ್ನತ ನ್ಯಾಯಾಲಯವು ನೀಡಿರುವ ಆದೇಶಗಳ ಹಿನ್ನೆಲೆಯಲ್ಲಿ ಹಾಗೂ ಇವರುಗಳ ಆದೇಶಗಳ ಹಿನ್ನೆಲೆಯಲ್ಲಿ ಹಾಗೂ ಇವರುಗಳ ಸೇವೆಯನ್ನು ಯಾವುದೆ ನಿಯಮಗಳಡಿಯಲ್ಲಿ ಸಕ್ರಮಗೊಳಿಸದೆ ಇರುವುದರಿಂದಲೂ ಹಾಗೂ ಸರ್ವೋಚ್ಚ ನ್ಯಾಯಲಯವು ಸಾಮೂಹಿಕವಾಗಿ ಸಕ್ರಮಗೊಲಿಸಲು ಆದೇಶಿಸಿರುವುದರಿಂದಲೂ ಮೀಸಲಾತಿ ಆದೇಶಗಳನ್ನು (ರೋಸ್ಟರ್ ಪದ್ಧತಿ) ದಿನಗೂಲಿ ನೌಕರರಿಗೆ ಅನ್ವಯಿಸಲು ಸಾಧ್ಯವಾಗಲಾರದು.

**ಶೃಂಗೇರಿ ಪೋಲೀಸ್ ಠಾಣೆಗೆ ಮಂಜೂರಾದ ಜೀಪಿನ ವಿಚಾರ**

832 - ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

*ಅ) ಶೃಂಗೇರಿ ಪೋಲೀಸ್ ಠಾಣೆಗೆ ಇಲಾಖೆಯ ಮುಖೇನ ಜೀಪ್ ಮಂಜೂರಾಗಿದೆಯೇ? ಇಲ್ಲದಿದ್ದಲ್ಲಿ ಆ ಠಾಣೆಗೆ ಜೀಪಿನ ಅವಶ್ಯಕತೆ ಇಲ್ಲವೇ?*

*ಆ) ಇದ್ದಲ್ಲಿ, ಆ ಠಾಣೆಗೆ ಎಂದು ಜೀಪನ್ನು ನೀಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಮಂಜೂರಾಗಿದೆ.